ಆರ್ ಬಿ ಐ / 2005 –06 / 135

ಉಲ್ಲೇಖ ಡಿಬಿಒಡಿ .ಸಂಖ್ಯೆ .ಎಎಂಎಲ್ .ಬಿಸಿ. 28 / 14.01.001 / 2005–06

ಆಗಸ್ಟ್ 23, 2005

ಗೆ,

ಎಲ್ಲಾ ಅನುಸೂಚಿತ ವಾಣಿಜ್ಯ ಬ್ಯಾಂಕುಗಳ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
(ಆರ್ ಆರ್ ಬಿ ಗಳನ್ನು ಹೊರತುಪಡಿಸಿ)

ಮಾನ್ಯರೆ

**ನಿಮ್ಮ ಗ್ರಾಹಕನ ಬಗ್ಗೆ ತಿಳಿಯಿರಿ(ಕೆವೈಸಿ) ಮಾರ್ಗಸೂಚಿಗಳು – ಅಕ್ರಮ ಹಣ ವರ್ಗಾವಣೆ ನಿರೋಧ ಮಾನಕಗಳು**

ಮೇಲ್ಕಂಡ ವಿಷಯದ ಬಗ್ಗೆ ನವೆಂಬರ್ 29,2004 ರಂದು ಹೊರಡಿಸಲಾಗಿರುವ ನಮ್ಮ ಸುತ್ತೋಲೆ ಡಿಬಿಒಡಿ. ಸಂಖ್ಯೆ .ಎಎಂಎಲ್.ಬಿಸಿ . 58 / 14.01.001 / 2004–05 ನ್ನು ದಯವಿಟ್ಟು ನೋಡಿ. ಮೇಲಿನ ಸುತ್ತೋಲೆಯಲ್ಲಿ ಖಾತೆಯನ್ನು ತೆರೆಯುವಾಗ ಅನುಸರಿಸಬೇಕಾದ ಗ್ರಾಹಕ ಅಂಗೀಕಾರ ನೀತಿ ಮತ್ತು ಗ್ರಾಹಕನನ್ನು ಗುರುತಿಸುವ ಕಾರ್ಯವಿಧಾನವನ್ನು ರೂಪಿಸುವಂತೆ ಬ್ಯಾಂಕುಗಳಿಗೆ ತಿಳಿಸಲಾಗಿತ್ತು. ಗ್ರಾಹಕರನ್ನು ಕಡಿಮೆ, ಮಧ್ಯಮ ಮತ್ತು ಹೆಚ್ಚು ಅಪಾಯದಲ್ಲಿರುವವರು ಎಂದು ಗ್ರಹಿಸಿ ಆಪಾಯಕ್ಕೆ ಅನುಸಾರವಾಗಿ ವರ್ಗೀಕರಿಸುವಂತೆಯೂ ಬ್ಯಾಂಕುಗಳಿಗೆ ತಿಳಿಸಲಾಗಿತ್ತು. 'ನಿಮ್ಮ ಗ್ರಾಹಕನ ಬಗ್ಗೆ ತಿಳಿಯಿರಿ' ಕುರಿತ ಮಾರ್ಗ ಸೂಚಿಗಳು ಕೂಡ ಸುತ್ತೋಲೆಯ ಅನುಬಂಧ – II ರಲ್ಲಿ ಪಟ್ಟಿ ಮಾಡಿರುವ ದಾಖಲೆಗಳ ಮೂಲಕ ಗ್ರಾಹಕನ ಗುರುತನ್ನು ಮತ್ತು ವಿಳಾಸವನ್ನು ಪರಿಶೀಲಿಸುವಂತೆ ಬ್ಯಾಂಕುಗಳನ್ನು ಅಗತ್ಯಪಡಿಸುತ್ತವೆ.

2. ಮೇಲೆ ತಿಳಿಸಿದ ಸುತ್ತೋಲೆಯಲ್ಲಿ ಗುರುತು ಮತ್ತು ವಿಳಾಸದ ರುಜುವಾತಿನ ದಾಖಲೆಗಳ ಅಗತ್ಯತೆಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿದ್ದರೂ ಕೂಡ, ಹೆಚ್ಚಿನ ಸಂಖ್ಯೆ ಜನ ವಿಶೇಷವಾಗಿ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಇರುವಂಥ ಕಡಿಮೆ ಆದಾಯ ಗುಂಪಿಗೆ ಸೇರಿದ ಜನ ತಮ್ಮ ಗುರುತು ಮತ್ತು ವಿಳಾಸದ ಬಗ್ಗೆ ಬ್ಯಾಂಕಿಗೆ ತೃಪ್ತಿಯಾಗುವಂಥ ದಸ್ತಾವೇಜುಗಳನ್ನು ಹಾಜರುಪಡಿಸುವ ಸ್ಥಿತಿಯಲ್ಲಿಲ್ಲ ಎಂಬುದನ್ನು ನಮ್ಮ ಗಮನಕ್ಕೆ ತರಲಾಗಿದೆ. ಇದರಿಂದ ಬ್ಯಾಂಕಿಂಗ್ ಸೇವೆಗಳನ್ನು ಪಡೆಯಲು ಅವರಿಗೆ ಸಾಧ್ಯವಾಗುತ್ತಿಲ್ಲ. ಪರಿಣಾಮವಾಗಿ ಅವರನ್ನು ಹಣಕಾಸು ಸೌಲಭ್ಯದಿಂದ ಹೊರಗಿಟ್ಟಂತಾಗುತ್ತದೆ. ಅದರಂತೆ, ಅವರ ಎಲ್ಲ ಖಾತೆಗಳನ್ನು ಒಟ್ಟಿಗೆ ತೆಗೆದುಕೊಂಡಲ್ಲಿ ಐವತ್ತು ಸಾವಿರ ರೂಪಾಯಿಗಳಿಗೆ ( ರೂ 50,000 /–) ಮೀರದಷ್ಟು ಶಿಲ್ಕನ್ನು ಖಾತೆಗಳಲ್ಲಿ ಉಳಿಸಿಕೊಂಡು ಬರಲು ಉದ್ದೇಶಿಸಿರುವ ಹಾಗೂ ಎಲ್ಲ ಖಾತೆಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಒಟ್ಟು ಸಾಲ ಒಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳನ್ನು (ರೂ 1,00,000) ಮೀರುವುದಿಲ್ಲವೆಂದು ನಿರೀಕ್ಷಿಸಲಾಗಿರುವ ವ್ಯಕ್ತಿಗಳಿಗೆ ಖಾತೆಯನ್ನು ತೆರೆಯುವುದಕ್ಕೆ ಸಂಬಂಧಿಸಿದ ಕೆವೈಸಿ ಕಾರ್ಯವಿಧಾನವನ್ನು ಮತ್ತಷ್ಟು ಸರಳೀಕರಿಸಲು ನಿರ್ಧರಿಸಲಾಗಿದೆ.

3. ಖಾತೆಯನ್ನು ತೆರೆಯಲು ಬಯಸುವ ಒಬ್ಬ ವ್ಯಕ್ತಿಯು ದಿನಾಂಕ ನವೆಂಬರ್ 29, 2004 ರ ಆರ್‌ಬಿಐ ಸುತ್ತೋಲೆಯ ಅನುಬಂಧ II ರಲ್ಲಿ ತಿಳಿಸಿರುವ ದಾಖಲೆಗಳನ್ನು ಹಾಜರುಪಡಿಸಲು ಅಸಮರ್ಥನಾದ ಪಕ್ಷದಲ್ಲಿ ಬ್ಯಾಂಕುಗಳು ಮೇಲಿನ ಪ್ಯಾರಾ 2 ರಲ್ಲಿ ವಿವರಿಸಿರುವಂತೆ, ಈ ಮುಂದಿನದಕ್ಕೆ ಒಳಪಟ್ಟು, ಖಾತೆಗಳನ್ನು ತೆರೆಯಬಹುದು.

(ಎ) ಪೂರ್ಣ ಕೆವೈಸಿ ಕಾರ್ಯವಿದಾನಕ್ಕೆ ಒಳಪಟ್ಟಿರುವ ಬೇರೊಬ್ಬ ಖಾತೆದಾರನಿಂದ ಪರಿಚಯ ಮಾಡಿಕೊಡುವವನು ಬ್ಯಾಂಕಿನಲ್ಲಿ ಹೊಂದಿರುವ ಖಾತೆಯು ಆರು ತಿಂಗಳಷ್ಟು ಹಳೆಯದಾಗಿರಬೇಕು ಮತ್ತು ತೃಪ್ತಿಕರವಾದ ವ್ಯವಹಾರವನ್ನು ತೋರಿಸಬೇಕು. ಖಾತೆ ತೆರೆಯಲು ಉದ್ದೇಶಿಸುವ ಗ್ರಾಹಕನ ಭಾವಚಿತ್ರ ಮತ್ತು ಆತನ ವಿಳಾಸ ಇವುಗಳನ್ನು ಆತನನ್ನು ಪರಿಚಯಿಸುವವನು ಪ್ರಮಾಣೀಕರಿಸಬೇಕಾಗುತ್ತದೆ.

ಅಥವಾ

(ಬಿ) ಬ್ಯಾಂಕಿಗೆ ತೃಪ್ತಿಯಾಗುವಂತಹ ಗ್ರಾಹಕನ ಗುರುತು ಮತ್ತು
ವಿಳಾಸಕ್ಕೆ ಸಂಬಂಧಿಸಿದ ಯಾವುದೇ ಇತರ ಸಾಕ್ಷ್ಯ

4. ಮೇಲೆ ವಿವರಿಸಿದಂತೆ ಖಾತೆಯನ್ನು ತೆರೆಯುವಾಗ, ಯಾವುದೇ ಒಂದು ಸಮಯದಲ್ಲಿ ಬ್ಯಾಂಕಿನಲ್ಲಿರುವ ಆತನ / ಆಕೆಯ ಎಲ್ಲ ಖಾತೆಗಳಲ್ಲಿನ ಶಿಲ್ಕು (ಒಟ್ಟಿಗೆ ತೆಗೆದುಕೊಂಡಾಗ) ಐವತ್ತು ಸಾವಿರ ರೂಪಾಯಿಗಳನ್ನು (50,000 ರೂ) ಮೀರಿದರೆ ಅಥವ ಖಾತೆಯಲ್ಲಿನ ಒಟ್ಟು ಸಾಲವು ಒಂದು ಲಕ್ಷ ರೂಪಾಯಿಗಳನ್ನು (1,00,000 /- ರೂ) ಮೀರಿದರೆ ಕೆವೈಸಿ ಕಾರ್ಯವಿಧಾನವನ್ನು ಪೂರ್ಣಗೊಳಿಸುವವರೆಗೆ ಮುಂದಿನ ಯಾವುದೇ ವ್ಯವಹಾರಗಳಿಗೆ ಅನುಮತಿ ನೀಡಲಾಗುವುದಿಲ್ಲ ಎಂಬ ವಿಷಯವನ್ನು ಗ್ರಾಹಕನಿಗೆ ಮನವರಿಕೆ ಮಾಡಿಕೊಡಬೇಕು. ಗ್ರಾಹಕನಿಗೆ ಅನಾನುಕೂಲವಾಗದಂತೆ ಮಾಡುವ ಸಲುವಾಗಿ ಶಿಲ್ಕು ನಲವತ್ತು ಸಾವಿರ ರೂಪಾಯಿಗಳನ್ನು ( 40,000 /- ರೂ ) ತಲುಪಿದಾಗ ಅಥವಾ ಒಂದು ವರ್ಷದಲ್ಲಿ ಒಟ್ಟು ಸಾಲ ಎಂಬತ್ತು ಸಾವಿರ ರೂಪಾಯಿಗಳನ್ನು ( 80,000 /-) ತಲುಪಿದಾಗ ಕೆವೈಸಿ ಯನ್ನು ನಡೆಸುವ ಸಲುವಾಗಿ ಸೂಕ್ತ ದಾಖಲೆಗಳನ್ನು ಸಲ್ಲಿಸುವಂತೆ, ತಪ್ಪಿದಲ್ಲಿ, ಎಲ್ಲ ಖಾತೆಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಒಟ್ಟು ಶಿಲ್ಕು ಐವತ್ತು ಸಾವಿರ ರೂಪಾಯಿಗಳನ್ನು (50,000/-) ತಲುಪಿದಾಗ ಅಥವಾ ಖಾತೆಗಳಲ್ಲಿನ ಒಟ್ಟು ಸಾಲ ಒಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳನ್ನು (ರೂ.1,00,000/-) ತಲುಪಿದಾಗ ಖಾತೆಯಲ್ಲಿನ ವ್ಯವಹಾರಗಳನ್ನು ನಿಲ್ಲಿಸುವುದಾಗಿ ಗ್ರಾಹಕನಿಗೆ ಅಧಿಸೂಚಿಸತಕ್ಕದ್ದು.

5. ನಮ್ಮ ಸುತ್ತೋಲೆ ಡಿಬಿಒಡಿ ಸಂಖ್ಯೆ .ಎಎಂಎಲ್. ಬಿಸಿ. 23 / 14.01.064 / 2005-06 ದಿನಾಂಕ ಆಗಸ್ಟ್ 2,2005 ರಲ್ಲಿ ಪ್ರವಾಹ ಪೀಡಿತ ಜನರ ಸಂಬಂಧದಲ್ಲಿ ಸರ್ಕಾರದಿಂದ ಅವರು ಪಡೆದ ಅನುದಾನವನ್ನು ಜಮೆ ಮಾಡುವುದಕ್ಕೆ ಅವರಿಗೆ ಸಾಧ್ಯವಾಗಿಸಲು ಇಳಿಸಿದ ಕೆವೈಸಿ ಮಾನಕಗಳನ್ನು ಅನ್ವಯಿಸಿ ಖಾತೆಗಳನ್ನು ತೆರೆಯುವಂತೆ ಬ್ಯಾಂಕುಗಳಿಗೆ ಸಲಹೆ ಮಾಡಲಾಗಿತ್ತು. ಈ ಖಾತೆಗಳನ್ನು ಸಹಾ ಈ ಸುತ್ತೋಲೆಯ ಅನ್ವಯ ತೆರೆಯಲಾದ ಖಾತೆಗಳಂತೆಯೇ ಪರಿಗಣಿಸಬೇಕು ಆದರೆ, ಅಂತಹ ಖಾತೆಗಳಲ್ಲಿನ ಗರಿಷ್ಠ ಶಿಲ್ಕನ್ನು ಸರ್ಕಾರದಿಂದ ಪಡೆದ ಅನುದಾನದ ಮೊತ್ತ ಅಥವಾ ಐವತ್ತು ಸಾವಿರ ರೂಪಾಯಿಗಳು (ರೂ. 50,000)ಇವುಗಳಲ್ಲಿ ಯಾವುದು ಹೆಚ್ಚೋ ಅದು ಎಂಬುದಾಗಿ ಅನುಮತಿಸಬಹುದು ಮತ್ತು ಅನುದಾನದ ಮೊತ್ತದ ಪ್ರಾರಂಭಿಕ ಜಮೆಯನ್ನು ಒಟ್ಟು ಜಮೆಗೆ ಸೇರಿಸಿ ಲೆಕ್ಕ ಹಾಕಬಾರದು.

6. ಈ ಸಂಬಂಧದಲ್ಲಿ ಕೂಡಲೇ ಅನುಷ್ಠಾನಕ್ಕಾಗಿ ತಮ್ಮ ಶಾಖೆಗಳಿಗೆ ಸೂಕ್ತ ಸೂಚನೆಗಳನ್ನು ನೀಡುವಂತೆ ಬ್ಯಾಂಕುಗಳಿಗೆ ತಿಳಿಸಲಾಗಿದೆ.

**ತಮ್ಮ ವಿಶ್ವಾಸಿ,**

**(ಪ್ರಶಾಂತ್ ಸರಣ್)**
**ಮುಖ್ಯ ಪ್ರಧಾನ ವ್ಯವಸ್ಥಾಪಕರು**